ಅಂತಲೋ ಹೇಳಿಕೊಂಡು ಬರುವವರ ಜತೆಗೆ ಹೆಚ್ಚು ಮಾತಾಡಲೂ ಅವಳಿಗೆ ಇಷ್ಟವಿಲ್ಲ.

ಫಂಕ್ಷನ್‌ನಲ್ಲಿ ಕೂತಿರುವಾಗಲೇ ಲ್ಯಾಬ್‌ನಿಂದ ಫೋನ್ ಬಂತು. ಇವತ್ತು ರಿಪೋರ್ಟ್ ಸಿಗಲ್ಲ. ನಾಳೆ ಸಂಜೆ ಬಂದು ಕಲೆಕ್ಟ್ ಮಾಡಿಕೊಳ್ಳಿ ಅಂದರು. ಸರಿ ಫೆಸ್ಟ್ ಮುಗಿಸಿಕೊಂಡೇ ಮನೆಗೆ ಹೋದರಾಯಿತು ಅಂತ ಅಲ್ಲೇ ಉಳಿದಳು. ಮನಸ್ಸಿನಲ್ಲಿ ಅರವಿಂದನ ಅಸಹಾಯಕತೆ ಮತ್ತು ಬೆಳಗಿನ ಜಾವದ ಕನಸು ನೆನಪಾಗಿ ಅವಳಲ್ಲಿ ಅನಿಶ್ಚಿತ ಭಾವ ಹುಟ್ಟಿತ್ತು.

ಆರು ತಿಂಗಳ ಹಿಂದೆ ಎರಡು ದಿನ ಅರವಿಂದನಿಗೆ ಜ್ವರ ಬಂತು. ಆಮೇಲೆ ಯಾಕೊ ಸುಸ್ತಾಗುತ್ತಿದೆ ಅಂತ ಇನ್ನೆರಡು ದಿನ ಮಲಗಿದ. ವಾರ ಕಳೆಯೋದರೊಳಗೆ ಕಾಲುಗಳಲ್ಲಿ ಶಕ್ತಿ ಕಡಿಮೆಯಾಗ್ತಿದೆ ಅಂದ. ಫ್ಯಾಮಿಲಿ ಡಾಕ್ಟರು ವೈರಲ್ ಫೀವರ್‌ನ ಎಫೆಕ್ಟ್ ಅಂದರು. ಎಂಆರೈ, ಅದೂ ಇದೂ ಅಂತ ಹಲವು ಟೆಸ್ಟ್ ಮಾಡಿಸಿದರು. ಕೊನೆಗೆ ಒಂದು ತಿಂಗಳು ಬೆಡ್ ರೆಸ್ಟ್‌ನಲ್ಲಿದ್ದರೆ ಸರಿಹೋಗುತ್ತೆ ಅಂದರು. ಆರು ತಿಂಗಳಾಯ್ತು. ಕೊನೆಗೆ ಪ್ರಜ್ಞಾ ಆಸ್ಪತ್ರೆಯ ಡೀನ್ ಡಾ. ಸುಹಾಸ್ ಅರವಿಂದನ ಸಮಸ್ಯೆ ಪತ್ತೆ ಹಚ್ಚಿದ್ದರು. ಬೆನ್ನುಹುರಿ ಪಕ್ಕದಲ್ಲಿ ಒಂದು ಸಣ್ಣ ಗ್ರೋಥ್ ಇದೆ. ಅದು ಸಿಸ್ಟ್ ಅಲ್ಲ. ಅದನ್ನು ಕರಗಿಸಿದರೆ ಸರಿಹೋಗುತ್ತೆ. ಮತ್ತೆ ಎಕ್ಸ್‌ರೇ ಜತೆಗೆ ಇನ್ನೂ ನಾಲ್ಕು ಟೆಸ್ಟ್ ಮಾಡಿಸಿ ಅಂದರು. ರಿಪೋರ್ಟ್ ಬಂದ ಮೇಲೆ ಟ್ರೀಟ್‌ಮೆಂಟ್ ಶುರು ಮಾಡ್ತೀನಿ, ಎಲ್ಲ ಸರಿಗೋಗುತ್ತೆ ಡೋಂಟ್‌ವರಿ ಅಂದಿದ್ದರು. ಆದರೂ ರಿಪೋರ್ಟ್‌ನಲ್ಲಿ ಏನಿರುತ್ತೋ ಅನ್ನೋ ಆತಂಕ. ಫೆಸ್ಟ್ ಮುಗಿದರೂ ಅವಳ ತಲೆಯಲ್ಲಿ ಅರವಿಂದನೇ ಇದ್ದ.

ಕ್ಯಾಂಪಸ್ಸಿನಿಂದ ಹೊರಡುವಾಗ ಜಯದೇವನನ್ನು ಕರೆದು, 'ನಾಳೆ ರಜೆ ಹಾಕ್ತೀನಿ... ಪ್ರಜ್ಞಾ ಆಸ್ಪತ್ರೆಯಲ್ಲಿ ನಂಗೆ ಬೇಕಾದವರೊಬ್ಬರು ಅಡ್ಮಿಟ್ ಆಗಿದ್ದಾರೆ. ಅವರನ್ನು ನೋಡೋಕೆ ಹೋಗಬೇಕು. ಈ ಲೀವ್‌ಲೆಟರ್‌ನ ಪ್ರೊಫೆಸರ್‌ಗೆ ನೀವೇ ಕೊಡಿ' ಅನ್ನುತ್ತ ಅವನ ಮುಖ ನೋಡಿದಳು.

'ಮೇಡಂ, ಪ್ರಜ್ಞಾ ಆಸ್ಪತ್ರೆ ಹಿಂದೇನೆ ನಮ್ಮ ಮನೆ. ನಾಳೆ ಮಧ್ಯಾಹ್ನದ ಮೇಲೆ ನಾನು ಮನೇಲೇ ಇರ್ತೀನಿ. ಹೆಂಗೂ ಅಲ್ಲೀವರೆಗೆ ಬರ್ತೀರಿ. ನಮ್ಮ ಮನೆಗೂ ಬಂದು ಹೋಗಿ. ನೀವು ಬಂದರೆ ಅಮ್ಮನಿಗೆ ಸಂತೋಷವಾಗುತ್ತೆ' ಅಂತ ಜಯದೇವ ವಿನಂತಿಯ ಧ್ವನಿಯಲ್ಲಿ ಹೇಳಿ, ಮನೆಯ ಲೊಕೇಷನ್ ಕಳಿಸ್ತೀನಿ ಅಂದ. ಜಯದೇವನ ಜೀವನ, ಅವನ ಅಪ್ಪ ಅಮ್ಮನ ಮನಃಸ್ಥಿತಿ, ಅವರ ಬದುಕಿನಲ್ಲಿ ಊಹಿಸಲೂ ಆಗದ ಏರಿಳಿತಗಳಿರಬಹುದೇ ಅನ್ನೋದನ್ನು ಅವರ ಮಾತುಗಳಿಂದ ಗ್ರಹಿಸಬಹುದು ಅನ್ನಿಸಿ, 'ಆಗಲಿ ನಾಳೆ ಸಂಜೆ ಐದರ ಹೊತ್ತಿಗೆ ಬರ್ತೀನಿ' ಅಂದಳು.

ಜಯದೇವ ಗೇಟಿನ ಒಳಗೇ ನಿಂತು ಕಾಯುತ್ತಿದ್ದ. ಕಾರಿಂದ ಕೆಳಕ್ಕಿಳಿಯುವಷ್ಟರಲ್ಲಿ ಗೇಟು ತೆಗೆದು, 'ವೆಲ್ ಕಂ' ಅನ್ನುತ್ತ ಮುಂದೆ ಬಂದ.

'ಮೇಡಂ, ದಯವಿಟ್ಟು ಅಪ್ಪನ ಬಗ್ಗೆ ಅಮ್ಮನತ್ರ ಏನೂ ಕೇಳಬೇಡಿ. ನಾನೇ ಯಾವಾಗ್ಲಾದ್ರೂ ಹೇಳ್ತೀನಿ...' ಅನ್ನುತ್ತ ತನ್ಮಯಿಯನ್ನು ಮನೆಯೊಳಕ್ಕೆ ಕರೆದುಕೊಂಡು ಹೋದ. ಮನೆಯಲ್ಲಿ ಶ್ರೀಮಂತಿಕೆಯ ಲಕ್ಷಣಗಳು ಎದ್ದು ಕಾಣುತ್ತಿದ್ದವು. ದುಬಾರಿ ಫರ್ನಿಚರುಗಳು, ಗೋಡೆಯ ಮೇಲೆ ಎರಡು ದೊಡ್ಡ ಪೆಯಿಂಟಿಂಗ್‌ಗಳು ಅಮ್ಮ, ಮಗನ ಅಭಿರುಚಿಗೆ ಸಾಕ್ಷಿಯಾಗಿದ್ದವು.

ಮನೆಯಲ್ಲಿ ಎಷ್ಟು ಜನ ಇರಬಹುದು ಅಂತ ತನ್ಮಯಿ ಅಂದಾಜು ಮಾಡುತ್ತಿರುವಷ್ಟರಲ್ಲಿ 'ನಮಸ್ತೇ' ಎನ್ನುತ್ತ ಜಯದೇವನ ಅಮ್ಮ ಬಂದೇಬಿಟ್ಟರು. 'ಜಯ್ ನಿಮ್ಮ ಬಗ್ಗೆ ಹೇಳಿದ್ದಾನೆ. ನಿಮ್ಮ ಕವಿತೆಗಳನ್ನು ಓದಿದ್ದೇನೆ. ನೀವು ಹೀಗಿರಬಹುದು ಅಂತ ಗೆಸ್ ಮಾಡಿದ್ದೆ, ಹಾಗೇ ಇದ್ದೀರಿ...' ಅನ್ನುತ್ತ ನಕ್ಕರು. ಕಪ್ಪುಬಣ್ಣದ ಕಾಟನ್ ಸೀರೆ ಉಟ್ಟಿದ್ದ ಬೆಳ್ಳನೆಯ ನೀಳದೇಹದ ಲಕ್ಷಣವಾದ ಹೆಂಗಸು. ಕತ್ತರಿಸಿದ ಉದ್ದ ಕೂದಲು. ದೊಡ್ಡ ಹುದ್ದೆಯಲ್ಲಿದ್ದು ನಿವೃತ್ತರಾಗಿರಬಹುದು ಅಂತ ಹೇಳಬಹುದಾದ ಚಹರೆ.